ಇಂದು ದಿ: **27.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು:**1** ಮತ್ತು **2** ನೇ ಪ್ರತಿವಾದಿಯರ ಪರ:ಶ್ರೀ ಎಸ್.ಎಂ., ವಕೀಲರರಿಂದ

ಎ.ಓ.ಡಿ, ಅಗ್ರಿಮೆಂಟ್, ಸಾಲ ಮಂಜೂರಾತಿ ಪತ್ರ, ಸಾಲದ ಅರ್ಜಿಯಲ್ಲಿ ಮುಂದೆ ಬರುವಂತಹ ಅರ್ಜಿಗಳಿಗೆ ಅದಂತಹ ಖರ್ಚಿಗೂ ಬಡ್ಡಿಯನ್ನು ವಿಧಿಸಲಾಗುತ್ತದೆ ಎನ್ನುವುದನ್ನು ನಮೂದು ಮಾಡಿ ಕೊಟ್ಟಿರುತ್ತಾರೆ. ಸದರಿ ವಿಷಯವನ್ನು ವಾದಪತ್ರದಲ್ಲಿ ಹೇಳಿರುತ್ತದೆ. ಲೆಡ್ಜರ್ ಎಕ್ಸ್‌ಟ್ರಾಕ್ಟ್, ವಿಮೆ, ಬಡ್ಡಿಗೆ ಬಡ್ಡಿ, ಲೆಡ್ಜರ್ ಚಾರ್ಜಸ್, ಎನ್ಸ್‌ಪೆಕ್ಷನ್ ಚಾರ್ಜಸ್ ಇವುಗಳ ಮೇಲೆ ಇರುವ ಬಡ್ಡಿಯನ್ನು ಕೊಡಲು ರೈತರು ಬಾಧ್ಯಸ್ಥರು ಎಂದರೆ ಸರಿಯಲ್ಲ. ಪುನರ್ ಜೀವನ ಪತ್ರದಲ್ಲಿ ಸಹಿಯನ್ನು ಮಾಡಿದ ದಿನವೇ ಆ ದಿನಾಂಕವನ್ನು ನಮೂದು ಮಾಡುತ್ತದೆ. ಸಾಲ ಕೊಡುವ ಸಮಯದಲ್ಲಿಯೇ ಪುನರ್ ಜೀವನ ಪತ್ರಕ್ಕೆ ನಾವು ಸಹಿಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸಾಲವನ್ನು ಕೊಡುವಾಗ ಅರ್ಧ ವಾರ್ಷಿಕ ಕಂತಿನಂತೆ ಮರಳಿಸಲು ಕೊಟ್ಟಿರುತ್ತೇವೆ. ಸಾಲದ ಹಣ ಮರುಪಾವತಿ ಮಾಡುವುದು ಬಾಕಿ ಉಳಿದ 3 ತಿಂಗಳಿನಿಂದ ದಂಡದ ಬಡ್ಡಿಯನ್ನು ವಿಧಿಸುತ್ತೇವೆ. ಸಾಲದ ಹಣ ಮರುಪಾವತಿ ಮಾಡಲು ಇರುವಂತಹ ಅರ್ಧ ವಾರ್ಷಿಕ ಕಂತಿನಂತೆ ಹಣ ಸಂದಾಯ ಮಾಡದೇ ಇದ್ದರೆ ಅಂದಿನಿಂದಲೇ ದಂಡದ ಬಡ್ಡಿಯನ್ನು ವಿಧಿಸುತ್ತೇವೆ. ಬಡ್ಡಿಯ ಮೊತ್ತಕ್ಕೆ ದಂಡದ ಬಡ್ಡಿಯನ್ನು ವಿಧಿಸುತ್ತೀರ ಎಂದರೆ ಸಾಕ್ಷಿ ಸಾಲ ಹಣ ಹಿಂದಿರುಗಿಸಲು ನಿಗಧಿಪಡಿಸಿದ ಕಂತಿನ ಮೊತ್ತವನ್ನು ಹಿಂದಿರುಗಿಸದೆ ಇದ್ದರೆ ಅದಕ್ಕೂ ದಂಡದ ಬಡ್ಡಿಯನ್ನು ವಿಧಿಸುತ್ತದೆ ಎಂದು ಹೇಳುತ್ತಾರೆ. ಅಸಲು ಸಾಲದ ಮೇಲೆ ವಿಧಿಸಿದ ಬಡ್ಡಿಯನ್ನು ಹಣ ಸಂದಾಯ ಮಾಡದೆ ಇದ್ದರೆ ಅಸಲು ಹಣದೊಂದಿಗೆ ಸೇರಿಸಿ ಲೆಕ್ಕ ಮಾಡುತ್ತಾರೆ. ವರ್ಷದಲ್ಲಿ 2 ಬಾರಿ ಇನ್ಸ್ ಪೆಕ್ಷನ್ ಮಾಡುತ್ತದೆ. ಇನ್ಸ್‌ಪೆಕ್ಷನ್ ಚಾರ್ಜಸ್ ಗೆ ರೈತರು ಬಡ್ಡಿ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಇನ್‌ಟ್ರೆಸ್ಟ್ ಗೈಡ್‌ಲೈನ್ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ರೈತರಿಂದ ದುಪ್ಪಟ್ಟು ಹಣವನ್ನು ವಸೂಲಿ ಮಾಡುವ ಸಲುವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.